

ಬೆಂಗಳೂರಿನಲ್ಲಿ ನಡೆದ 7ನೇ ಅಖಿಲ ಕರ್ನಾಟಕ ಲೇಖಕಿಯರ ಸಾಹಿತ್ಯ ಸಮ್ಮೇಳನದಲ್ಲಿ ಅಧ್ಯಕ್ಷತೆ ವಹಿಸಿದ್ದ ಪ್ರತಿಭಾ ರಾಯ್ ಚಿತ್ರ: ವಿಶ್ವನಾಥ ಸುವರ್ಣ

ಮುಂದಿನ ಭಾಗಕ್ಕೆ ವಿಮರ್ಶಕರು ಮತ್ತು ಓದುಗರೇ ಉತ್ತರಿಸಬೇಕು.

◆ **ನೀವು ಶೈಕ್ಷಣಿಕ ಮನೋವಿಜ್ಞಾನದಲ್ಲಿ ಸ್ನಾತಕೋತ್ತರ ಪದವಿ ಪಡೆದಿರುವಿರಿ. ಈ ವೃತ್ತಿಪರ ಶಿಕ್ಷಣವು ನಿಮ್ಮ ಸೃಜನಶೀಲ ಬರವಣಿಗೆಯ ಪ್ಯಾಶನ್‌ಗೆ ಸಹಕಾರಿಯಾಗಿದೆ ಎಂದು ಭಾವಿಸುವಿರಾ? ಹೌದು ಎಂದಾದರೆ ಹೇಗೆ?**

ನಾನು ಶಿಕ್ಷಣದಲ್ಲಿ ಸ್ನಾತಕೋತ್ತರ ಪದವಿ ಮತ್ತು ಶೈಕ್ಷಣಿಕ ಮನೋವಿಜ್ಞಾನದಲ್ಲಿ ಡಾಕ್ಟರೇಟ್ ಸಂಶೋಧನೆ ಮಾಡಿದ್ದೇನೆ. ಶಿಕ್ಷಣ ಶಾಸ್ತ್ರದಲ್ಲಿ ಕಲಿಕೆಯ ಪ್ರಮುಖ ವಿಷಯ ತತ್ವಶಾಸ್ತ್ರವಾಗಿತ್ತು. ಅಲ್ಲದೆ ಪ್ರಾಧ್ಯಾಪಕಿಯಾಗಿದ್ದು, ಮನೋವಿಜ್ಞಾನದಲ್ಲಿ ಡಾಕ್ಟರೇಟ್ ಪದವಿ ಪಡೆದಿರುವುದು ಖಂಡಿತವಾಗಿಯೂ ನನ್ನ ಸೃಜನಶೀಲ ಅಭಿವ್ಯಕ್ತಿಗೆ ನ್ಯಾಯ ಒದಗಿಸಲು ಸಹಾಯಕವಾಗಿದೆ.

◆ **ಮೂರು ದಶಕಗಳ ಹಿಂದೆ, ನೀವು 'ಮೂರ್ತಿದೇವಿ' ಪ್ರಶಸ್ತಿ ವಿಜೇತ ಮೊದಲ ಮಹಿಳಾ ಬರಹಗಾರ್ತಿಯಾದಿರಿ. ಅಲ್ಲದೆ ಇದುವರೆಗೆ ನೀವೊಬ್ಬರೇ ಆ ಪ್ರಶಸ್ತಿ ಪಡೆದಿರುವ ಲೇಖಕಿ. ಅದನ್ನು ಘೋಷಿಸಿದಾಗ ನಿಮ್ಮ ಪ್ರತಿಕ್ರಿಯೆ ಏನಿತ್ತು?**

'ಮೂರ್ತಿದೇವಿ' ಪ್ರಶಸ್ತಿ ಪ್ರಕಟಗೊಂಡಾಗ ನನ್ನ ತಕ್ಷಣದ ಪ್ರತಿಕ್ರಿಯೆ ಅಚ್ಚರಿಯೇ ಆಗಿತ್ತು (1991). ಆ ಕಾಲದಲ್ಲಿ, ಒಡಿಶಾದಲ್ಲಿ 'ಮೂರ್ತಿದೇವಿ' ಪ್ರಶಸ್ತಿ ಎಂದರೆ ಏನೆಂದು ಯಾರಿಗೂ ಗೊತ್ತಿರಲಿಲ್ಲ.